



# ದ್ರಾಕ್ಷಿ ಮರ?

ದ್ರಾಕ್ಷಿ ಹಣ್ಣು ಮರದಲ್ಲಿ ಬೆಳೆಯುತ್ತಾ? ಎಲ್ಲರಿಗೂ ತಿಳಿದ ಹಾಗೆ ದ್ರಾಕ್ಷಿ ಬೆಳೆಯುವುದು ಬಳ್ಳಿಯಲ್ಲಿ. ಆದರೆ ಬ್ರೆಜಿಲ್ ದೇಶದಲ್ಲಿನ 'ಜಬುಟಿಕಾಬ' ಎಂಬ ಹಣ್ಣಿನ ಮರವನ್ನು ನೋಡಿದಾಗ ತುಸು ಅಚ್ಚರಿಯಾಗುವುದು ಖಂಡಿತ. ಇದು ದ್ರಾಕ್ಷಿಯನ್ನೇ ಹೋಲುತ್ತದೆ.

'ಬ್ರೆಜಿಲಿಯನ್ ಗ್ರೇಪ್ ಟ್ರಿ' ಎಂದೂ ಕರೆಯಲ್ಪಡುವ ಈ ಮರದ ಬೊಡ್ಡೆ ಹಾಗೂ ರೆಂಬೆಗಳ ಮೇಲೆಯೇ ಅಂಟಿಕೊಂಡಂತೆ ಹೂ ಹಾಗೂ ಹಣ್ಣುಗಳು ಬಿಡುತ್ತವೆ. ಈ ಮರಗಳು ಬ್ರೆಜಿಲ್ ದೇಶದ ದಕ್ಷಿಣ ಭಾಗದಲ್ಲಿರುವ ಮಿನಾಸ್ ಜಿರಿಯಸ್ ಹಾಗೂ ಸಾವೋಪಾಲೋ ಎಂಬ ರಾಜ್ಯಗಳಲ್ಲಿ ಕಂಡುಬರುತ್ತವೆ.

ಮೈಟರಾಸಿಯೇ ವಂಶಕ್ಕೆ ಸೇರಿದ ಈ ಮರದ ವೈಜ್ಞಾನಿಕ ಹೆಸರು ಫ್ಲಿನಿಯಾ ಕಾಲಿಲೋರ್ರಾ. ಟುಪಿ ಭಾಷೆಯಲ್ಲಿ ಜಬುಟಿ ಎಂದರೆ ಆಮೆ ಹಾಗೂ ಕಾಬಾ ಎಂದರೆ ಸ್ಥಳ ಎಂಬ ಅರ್ಥವಿದೆ. ಕೆಳಕ್ಕೆ ಉದುರಿದ ಹಣ್ಣುಗಳನ್ನು ತಿನ್ನಲು ಆಮೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಈ ಹೆಸರು ಬಂದಿರಬಹುದು.

ಜಬುಟಿಕಾಬ ಹಣ್ಣುಗಳು ಚಿಕ್ಕದಾಗಿ ಗುಂಡಗಿದ್ದು, ಮೂರರಿಂದ ನಾಲ್ಕು ಸೆಂಟಿ ಮೀಟರ್ ನಷ್ಟು ಸುತ್ತಳತೆಯನ್ನು ಹೊಂದಿರುತ್ತವೆ. ಇದರೊಳಗೆ 3 ಅಥವಾ 4 ದೊಡ್ಡ ಗಾತ್ರದ ಬೀಜಗಳಿರುತ್ತವೆ. ಬಿಳಿ ಅಥವಾ ತಿಳಿಗುಲಾಬಿ ಬಣ್ಣದ ಜಿಲಾಟಿನ್ ತಿರುಳಿದ್ದು, ದಟ್ಟ ನೇರಳೆ ಬಣ್ಣದ ದಪ್ಪನಾದ ಸಿಪ್ಪೆಯನ್ನು ಹೊಂದಿರುವ ಈ ಹಣ್ಣುಗಳು ತಿನ್ನಲು ಸಿಹಿಯಾಗಿರುತ್ತವೆ. ಸಾಮಾನ್ಯವಾಗಿ ಈ ಮರ ವರ್ಷಕ್ಕೆ ಒಂದು ಅಥವಾ ಎರಡು ಸಲ ಹಣ್ಣುಗಳನ್ನು ಬಿಡುತ್ತವೆ. ಆದರೆ ಈ ಮರಗಳಿಗೆ ನೀರು ಸತತವಾಗಿ ಸಿಕ್ಕರೆ ಇನ್ನೂ ಹೆಚ್ಚು ಸಲ ಫಲಗಳನ್ನು ನೀಡುತ್ತದೆ. ಈ ಮರದ ರೆಂಬೆ ಕೊಂಬೆಗಳ ತುಂಬ ಹೂಗಳು ಅರಳಿರುವುದನ್ನು ದೂರದಿಂದ ನೋಡಿದಾಗ ಈ ಮರಕ್ಕೆಲ್ಲಾ ಹಾವಸೆ ಕಟ್ಟಿದೆಯೇನೋ ಎಂದೆನ್ನಿಸುತ್ತದೆ. ಆದರೆ ಬೊಡ್ಡೆಗಳ ತುಂಬಾ ಹಣ್ಣುಗಳನ್ನು ಬಿಟ್ಟ ಮರವನ್ನು ನೋಡಿದಾಗ ತುಸು ವಿಸ್ಮಯವಾಗುತ್ತದೆ. ತಾಜಾ ಹಣ್ಣುಗಳು ಉಷ್ಣವಲಯ ಪ್ರದೇಶದಲ್ಲಿ ವರ್ಷಪೂರ್ತಿ ದೊರಕುತ್ತವೆ.

## ಔಷಧೀಯ ಗುಣ

ಹಣ್ಣನ್ನು ಜಾಮ್, ವೈನ್ ಹಾಗೂ ಇತರೆ ಕಡು ಪಾನೀಯಗಳನ್ನು ತಯಾರಿಸಲು ಬಳಸುತ್ತಾರೆ. ಈ ಹಣ್ಣು ಬಹಳಷ್ಟು ಔಷಧೀಯ ಗುಣಗಳನ್ನು ಹೊಂದಿದೆ. ಒಣಗಿಸಿದ ಸಿಪ್ಪೆಯಿಂದ ಮಾಡಿದ ಕಷಾಯವನ್ನು ಅತಿಸಾರ, ಆಸ್ತಮಾ ಮತ್ತು ಟಾನ್ಸಿಲ್ ಉರಿಯೂತವನ್ನು ಶಮನಗೊಳಿಸಲು ಉಪಯೋಗಿಸುತ್ತಾರೆ. ಈ ಹಣ್ಣುಗಳು ಕ್ಯಾನ್ಸರ್ ಅನ್ನು ಗುಣಪಡಿಸುವ ಅಂಶಗಳನ್ನು ಸಹ ಹೊಂದಿದೆ. ಹಣ್ಣುಗಳನ್ನು ಕಿತ್ತ ನಂತರ ಕೇವಲ 3–4 ದಿನಗಳಲ್ಲೇ ಕೊಳೆತು ಹೋಗುವುದರಿಂದ, ಇವುಗಳನ್ನು ಬೆಳೆಯುವ ಸುತ್ತಮುತ್ತಲ ಪ್ರದೇಶದಲ್ಲಿ ಮಾತ್ರ ಸಿಗುತ್ತವೆ.

■ **ವಿದ್ಯಾ ವಿ. ಹಾಲಭಾವಿ**



